**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 3003/2022.**

**ಚಾ.ಸಾ-1**

**ಪ್ರಾ.ಸಾ - 1**

**ಸಾಕ್ಷಿಗೆ ದಿನಾಂಕ 20.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಕುತಬಿ ವಾಲಿಕಾರ |
| ಗಂಡನ ಹೆಸರು | ಃ ಚಾಂದಸಾ |
| ವಯಸ್ಸು | ಃ 70 ವರ್ಷ |
| ಉದ್ಯೋಗ | ಃ ಗೃಹಿಣಿ |
| ವಾಸಸ್ಥಳ | ಃ ಸಂಕನಾಳ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಆರೋಪಿತರ ನನ್ನ ಮಗ ಮತ್ತು ಸೊಸೆಯಾಗಬೇಕು. ಈಗ 4 ವರ್ಷಗಳ ಹಿಂದೆ ನಾವು ಕಟ್ಟಿದ ಮನೆಯನ್ನು 2ನೇ ಆರೋಪಿಯು 1ನೇ ಆರೋಪಿಯ ಹೆಸರಿನಲ್ಲಿ ಮಾಡಿರುತ್ತಾನೆ. ಅದನ್ನು ಕೇಳಿದಾಗ 1ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿರುತ್ತಾರೆ. ನಂತರ ನಾನು ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು ಅದು ದೂರಾಗಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿ ಹೆಬ್ಬೆಟ್ಟಿನ ಗುರುತಾಗಿರುವ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ನಂತರ ಪೊಲೀಸರು ಸ್ಥಳಕ್ಕೆ ಬಂದು ಮಹಜರ ಕ್ರಮ ಜರುಗಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿದ್ದು ಅದು ಮಹಜರ ಆಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿ ಹೆಬ್ಬೆಟ್ಟಿನ ಗುರುತಾಗಿರುವ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಸದರಿ ಸ್ಥಳದಲ್ಲಿ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು**

**ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)**

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

**2.** ದಿಃ 10.06.2022 ರಂದು ಸಂಜೆ 6-00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ನಂತರ ಚಾಸಾ 4 ಮತ್ತು 5 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜಿ.ಬಿ.ಬಿ. ವಕೀಲರಿಂದಃ-</u>**

**3.** ಕಟ್ಟಿದ ಮನೆ 1 ನೇ ಆರೋಪಿಯ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ. ಜಗಳವಾದ 1 ನೇ ಆರೋಪಿಯು ಚಪ್ಪರಗಿ ಗ್ರಾಮದಲ್ಲಿ ವಾಸವಾಗಿದ್ದರು. 2 ನೇ ಆರೋಪಿಯು ಸಂಕನಾಳ ಗ್ರಾಮದಲ್ಲಿ ಬೇರೆ ಮನೆಯಲ್ಲಿ ಬಾಡಿಗೆದಾರನು ಆಗಿದ್ದನು ಎಂದರೆ ಸರಿ. ನಂತರ ನನ್ನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ 7 ಜನ ಮಕ್ಕಳು. ನನ್ನ ಮನೆ 1 ನೇ ಆರೋಪಿಯ ಹೆಸರಿನಲ್ಲಿ ಇರುವ ಕಾರಣ ಸಿಟ್ಟು ಇರುತ್ತದೆ ಎಂದರೆ ಸರಿಯಲ್ಲ. ನಾನು ವಾಸಿಸುವ ಮನೆ ಸರ್ಕಾರಿ ಗೌಂಟಾನ ಜಾಗ ಎಂದರೆ ಸರಿ. ನಾನು ವಾಸಿಸುವವ ಮನೆ 1 ನೇ ಆರೋಪಿಯ ಹೆಸರಿನಲ್ಲಿ ಇರುವ ಕಾರಣ ಅವಳನ್ನು ಹೊರ ಹಾಕುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ವರದಕ್ಷಣೆ ತರದ ಕಾರಣ ಅವಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಸದರಿ ಮನೆಯಲ್ಲಿ ವಾಸವಾಗಿಲ್ಲ, ಆರೋಪಿತರು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಜಗಳವಾದ ದಿನಾಂಕ ನೆನಪಿರುವುದಿಲ್ಲ. ದೂರನ್ನು ಪೊಲೀಸರು ಬರೆದಿರುತ್ತಾರೆ ಎಂದರೆ ಸರಿ. ನಾನು ಪೊಲೀಸರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಜಗಳವಾದ ಮರುದಿನ ದೂರನ್ನು ಸಲ್ಲಿಸಿರುತ್ತೇನೆ. ಗಲಾಟೆಯಾದಗ ಓಣಿಯವರು ಬಂದಿರುತ್ತಾರೆ, ಅವರ ಹೆಸರು ಹೇಳಲು ಬರುವುದಿಲ್ಲ. ದೂರನ್ನು ನೀಡಲು ನಾನೊಬ್ಬಳೆ ಹೋಗಿರುತ್ತೇನೆ. ನಾನು ಸದರಿ ಮನೆಯಲ್ಲಿ ವಾಸವಾಗಿಲ್ಲ, ಆರೋಪಿತರು ಯಾವುದೇ ಹಲ್ಲೆ

ಮಾಡಿಲ್ಲ, ಯಾವುದೇ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**